www.impactmeasurement.co.in

Date : 16-Mar-2006 Edition : Bangalore Page No.: 1 Page Name: Front Page Size: 100%

Sector: IT Circulation: 97000 AVE: Rs.32606.00 Frequency: Daily

Publication: Kannada Prabha Title: Kannada keyboard from HP

● ಒತ್ತುಗುಂಡಿಗಳ ಕೀಲಿಮಣೆಯಲ್ಲ ಇದು ಪೆನ್-ಪ್ಯಾಡ್ ಕೀಬೋರ್ಡ್ ●

# ಕಂಪ್ಯೂಟರ್‌ಗೆ ಈಗ ಕನ್ನಡ ಲೇಖನಿಮಣೆ

ಕನ್ನಡಪ್ರಭ ವಾರ್ತೆ, ಬೆಂಗಳೂರು, ಮಾ.15
ಸುವರ್ಣ ಕರ್ನಾಟಕ ರಾಜ್ಯೋತ್ಸವ ವರ್ಷದಲ್ಲಿ ಕಾಕತಾಳೀಯವಾಗಿ ಕನ್ನಡಕ್ಕಾಗಿ ಒಂದು ಹೊಸ ಕಂಪ್ಯೂಟರ್ ಕೀಲಿಮಣೆಯನ್ನು ಅಭಿವೃದ್ಧಿಪಡಿಸಲಾಗಿದೆ. ಇಂಗ್ಲಿಷ್ ಭಾಷೆ ಹಾಗೂ ಟೈಪಿಂಗ್ ಬಾರದ ಕನ್ನಡಿಗರೂ ಸಹ ಸುಲಭವಾಗಿ ಕಂಪ್ಯೂಟರ್‌ನಲ್ಲಿ ಕನ್ನಡದ ಬರಹಗಳನ್ನು 'ಬರೆಯುವ' ಹೊಸ ತಂತ್ರಜ್ಞಾನ ಈ ಕೀಬೋರ್ಡ್‌ನಲ್ಲಿದೆ.

ಮಾಮೂಲಿಯಂತೆ **ABCD** ಒತ್ತುಗುಂಡಿಗಳು ಇದರಲ್ಲಿ ಇಲ್ಲ. ಅಆಇಈ ಅಕ್ಷರಗಳ ಚೌಕುಳಿಗಳಿವೆ. ಪೆನ್ ಹಾಗೂ ಮೌಸ್ ಪ್ಯಾಡ್‌ನಂತಹ ಈ ವಿಶೇಷ ಕೀಬೋರ್ಡ್‌ಗೆ



ಜೆಶ್ಚರ್ ಬೇಸ್ಡ್ ಕೀಬೋರ್ಡ್ (ಜಿಕೆಬಿ) ಎಂದು ಹೆಸರು. ಕೀಪ್ಯಾಡ್ ಮೇಲಿನ ಕನ್ನಡ ಅಕ್ಷರಗಳ ಮೇಲೆ ಪೆನ್‌ನಂತಹ ಸಾಧನದಿಂದ ಒತ್ತಿದಾಗ ಕಂಪ್ಯೂಟರ್ ತೆರೆಯ ಮೇಲೆ ಅಕ್ಷರಗಳು ಮೂಡುತ್ತವೆ.

ಬೆಂಗಳೂರಿನಲ್ಲಿರುವ ಹ್ಯೂಲೆಟ್ ಪ್ಯಾಕರ್ಡ್ ಲ್ಯಾಬ್ಸ್ ಕಂಪನಿ ಈ ಜೆಶ್ಚರ್ ಬೇಸ್ಡ್ ಕೀಬೋರ್ಡ್‌ನ್ನು ಅಭಿವೃದ್ಧಿಪಡಿಸಿದೆ. ಈ ಸಾಧನದಿಂದ ಕನ್ನಡ ಡಿಟಿಪಿ ವೃತ್ತಿಪರರಿಗೆ ಹೆಚ್ಚು ಅನುಕೂಲ ಆಗಲಾರದು. ಆದರೆ, ಕಂಪ್ಯೂಟರ್ ಹಾಗೂ ಕನ್ನಡ ಟೈಪಿಂಗ್ ಬಗ್ಗೆ ಹೆಚ್ಚು ಪರಿಚಯ ಇಲ್ಲದ ವ್ಯಕ್ತಿಗಳಿಗೆ ಇದು ಅನುಕೂಲವಾಗಬಹುದು.



© Kannada Prabha www.kannadaprabha.com